ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 6, May-June, 2024, Pp. 91-96
©*IIMRD*, Mysuru

IIMRD JOURNALS

www.iimrd.com

# ಕರ್ನಾಟಕದ ಕುಂಭಕಲೆ

**ಡಾ. ಜಿ. ಕೆ. ಕರಿಯಮ್ಮ**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಡುಗುಡಿ, ಬೆಂಗಳೂರು.

**ಸಾರಾಂಶ: (Abstract)**

*ಕುಂಬಾರಿಕೆ ಅತ್ಯಂತ ಪುರಾತನ ಕಸುಬು ಇತಿಹಾಸ ದಾಖಲಾಗುವುದಕ್ಕಿಂತಲೂ ಯುಗಾಂತರಗಳ ಮೊದಲು ಇದರ ತಯಾರಿಕೆ ಇತ್ತೆಂಬ ಅಂಶಗಳು ಇತಿಹಾಸ ಪೂರ್ವ ಯುಗದ ದಾಖಲೆಗಳಿಂದ ತಿಳಿದುಬರುತ್ತದೆ. ವಿಶ್ವದ ಪ್ರತಿಯೊಂದು ಜನಾಂಗ, ವಿಶ್ವದ ಪ್ರತಿ ಮೂಲೆಯಲ್ಲಿ ಈ ಕಸುಬನ್ನು ಪೋಷಿಸಿದ ಜೇಡಿಮಣ್ಣು ಮತ್ತು ಪಿಂಗಾಣಿಯಲ್ಲಿ ಮಡಕೆಗಳು, ವಿವಿಧ ಬಗೆಯ ಆಕೃತಿಗಳನ್ನು ತಯಾರಿಸಿದ ಈ ಪರಂಪರೆಯನ್ನು ಒಬ್ಬರಿಂದ ಮತ್ತೊಬ್ಬರು ಕಲಿತು ಪೋಷಿಸಿದ್ದಾಗಿದೆ. ಕುಂಬಾರಿಕೆಯಲ್ಲಿ, ಪ್ರತಿಮೆಗಳು ಮತ್ತು ಆಟಿಕೆಸಾಮಾನುಗಳು, ಹರಕೆಯ ಮೂರ್ತಿಗಳು, ಸಾಂಸ್ಕೃತಿಕ ಸಂದರ್ಭದ ಮೂರ್ತಿಗಳು, ಅಲಂಕರಣದ ಮಡಿಕೆಗಳು ಎಂಬುದಾಗಿ ವಿಂಗಡಿಸಲಾಗಿದೆ. ಕುಂಬಾರಿಕೆಯು ಕುಶಲಕಲೆಯಾಗಿದ್ದು, ಕುಶಲತೆ, ಉಪಯುಕ್ತತೆ, ಬಣ್ಣಗಾರಿಕೆಗಳು ಪ್ರಾಮುಖ್ಯತೆ ಪಡೆದಿವೆ.*

**ಮುಖ್ಯಪದಗಳು (Keywords):** ಕುಂಬಾರಿಕೆ, ಸಂಪ್ರದಾಯಿಕ ಕುಂಭಕಲೆ, ಅಲಂಕಾರಿಕ ವಸ್ತುಗಳು,

## ಪೀಠಿಕೆ

ಭಾರತದಲ್ಲಿ ಇತಿಹಾಸ ಪೂರ್ವಯುಗದ ಕಾಲದಲ್ಲಿಯೇ ಕಂಡುಬರುವ ಈ ಕಲೆಯು, ಸಿಂಧೂ ಕಣಿವೆ ನಾಗರೀಕತೆಯ ಕಾಲದಲ್ಲಿ ವ್ಯಾಪಕವಾಗಿ ಬೆಳವಣಿಗೆಗೊಂಡ ಈ ಕಲೆಯು, ವೇದಗಳ ಕಾಲದಲ್ಲಿ ನಾಜೂಕಾಗಿ, ಕಲಾತ್ಮಕತೆ, ಬಣ್ಣದಿಂದ, ಚಿತ್ತಾರದಿಂದ ರೂಪಗೊಂಡ ಕಲೆಯಾಗಿ ಬೆಳವಣಿಗೊಂಡಿತು. ಕರ್ನಾಟಕ, ಕೇರಳ, ಆಂಧ್ರಪ್ರದೇಶ, ಮಧ್ಯಪ್ರದೇಶ, ಕಾಶ್ಮೀರ ದವರೆಗೂ ಈ ಕಲೆಯ ಅಸ್ಥಿತ್ವವನ್ನು ಕಾಣಬಹುದು. ಕುಂಭಕಲೆಯು ಮಾನವನ ಜೀವನದ ಅಭಿವ್ಯಕ್ತಿಯಾಗಿದೆ. ಮಣ್ಣಿನಲ್ಲಿ ಕುಂಭವನ್ನು ಮಾಡುವವ ಕುಂಬಾರನಾದ. ಕುಂಭವೆಂದರೆ ಸಂಸ್ಕೃತದಲ್ಲಿ ನೀರಿನ ಗಡಿಗೆ ಎಂದರ್ಥ.

ಮಾನವನ ಅತ್ಯಂತ ಪುರಾತನ ಕಲೆಗಳಲ್ಲಿ ಕುಂಭಕಲೆಯೂ ಕೂಡ ಒಂದು ಇದೊಂದು ಶುದ್ಧಕಲೆಯೆನ್ನುವುದಕ್ಕಿಂತ ಜೀವನೋಪಯೋಗಿ ಕಲೆ ಎನ್ನಬಹುದು. ಗ್ರಾಮೀಣ

*Please cite this article as:* ಕರಿಯಮ್ಮ ಜಿ.ಕೆ. (2024). ಕರ್ನಾಟಕದ ಕುಂಭಕಲೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(6). ಪು.ಸಂ.* 91–96

ಪರಂಪರೆಯಲ್ಲಿ ಬೆಳೆದು ಬಂದ ಹನ್ನೆರಡು ಕುಲ ಕಸುಬುಗಳಲ್ಲಿ ಕುಂಬಾರಿಕೆಯು ಪ್ರಮುಖವಾದುದು. ಹಳೆಯ ಶಿಲಾಯುಗದಲ್ಲಿ ಮಾನವನು ಮಡಿಕೆಗಳನ್ನು ತಯಾರಿಸಿದ್ದರೂ ಹೊಸ ಶಿಲಾಯುಗದ ಕಾಲದಲ್ಲಿ ಉತ್ತಮವಾದ ಆಕಾರ ಮತ್ತು ಗುಣಮಟ್ಟದ ಮಡಕೆಗಳನ್ನು ತಯಾರಿಸಲಾಗುತ್ತಿತ್ತು.

ಭಾರತದಲ್ಲಿ ಕುಂಭಕಲೆಯನ್ನು ನಾಲ್ಕು ಹಂತಗಳಲ್ಲಿ ಗುರುತಿಸಬಹುದು. ಅವುಗಳಲ್ಲಿ ಹರಪ್ಪ ಪೂರ್ವಕಾಲ, ಹರಪ್ಪ ನಾಗರೀಕತೆಯ ಕಾಲ, ಹರಪ್ಪ ನಂತರದ ಕಾಲ ಮತ್ತು ಆಧುನಿಕ ಕಾಲ. ಈ ಕಾಲಾವಧಿಗಳಲ್ಲಿ ಮಡಿಕೆ ತಯಾರಿಕೆಯು ಒಂದು ವೃತ್ತಿಯಾಗಿ ಮಾರ್ಪಟ್ಟಿತು. ಪಾಟರ್ ಮೈಕೆಲ್ ಅವರು *Left hand is the heart hand* ಎಂದು ಹೇಳಿದ್ದಾರೆ. ಮಹಿಳೆಯರೇ ಮಡಿಕೆ ತಯಾರಿಕೆಯಲ್ಲಿ ಮೊದಲ ನಿರ್ಮಾತೃವಾಗಿದ್ದಾರೆ. ಆದ್ದರಿಂದ ಅವರನ್ನು ತಾಯಿಗಡಿಗೆ ಎಂಬುದಾಗಿಯೂ ಕರೆಯಲಾಗಿದೆ. ಆದರೂ ಈ ಕಲೆಯ ಹುಟ್ಟಿಗೆ ಕಾರಣರಾದವರ ಬಗೆಗಿನ ಇತಿಹಾಸವನ್ನು ಕಡೆಗಣಿಸಲಾಗಿದೆ.

ಕರ್ನಾಟಕದ ಅನೇಕ ಸ್ಥಳಗಳಲ್ಲಿ ಮಡಿಕೆಗಳು ಲಭ್ಯವಾಗಿವೆ. ಹೂಳಲ್ಪಟ್ಟಂತಹ ಗೋರಿಗಳಲ್ಲಿ ಮಾನವನ ವಸತಿ ನೆಲೆಗಳಲ್ಲಿ ದೊರಕಿವೆ. ಕರ್ನಾಟಕದಲ್ಲಿ ಚಿಕ್ಕಮಗಳೂರು, ಖಾನಾಪುರ, ಕೋಲಾರ, ಬೆಂಗಳೂರು, ಚಿತ್ರದುರ್ಗ, ಮಂಗಳೂರು, ಗುಲ್ಬರ್ಗ, ಶಿವಮೊಗ್ಗ ಪರಿಸರದಲ್ಲಿ ಬೃಹತ್ ಶಿಲಾಯುಗದ ಸಂಸ್ಕೃತಿಯ ಕಾಲಕ್ಕೆ ಸೇರಿದ ಪ್ರಾಚೀನ ಅವಶೇಷಗಳು ಬಹಳಷ್ಟು ಪ್ರಮಾಣದಲ್ಲಿ ದೊರಕಿವೆ. ಇವುಗಳಲ್ಲಿ 1932 ರಲ್ಲಿ ಜಾಲಹಳ್ಳಿ ಪ್ರದೇಶದಲ್ಲಿ ಕೆಂಪು ಮಡಿಕೆಗಳು, ಮಾಗಡಿ ತಾಲೂಕಿನ ಅಳಕುಂಟೆ ಸಮೀಪ ಬೃಹತ್‌ಶಿಲಾಯುಗದ ಮಡಿಕೆಗಳು ಅಲ್ಲದೇ ಲೋಹದ ಸಾಮಗ್ರಿಗಳು ದೊರಕಿವೆ. ಮಾರ್ಟಿಮರ್‌ವ್ಹೀಲರ್‌ರವರ ಬ್ರಹ್ಮಗಿರಿ ಉತ್ಖನದಿಂದ ಕ್ರಿ.ಪೂ 1200–1000 ಕಾಲದಲ್ಲಿ ಸತ್ತವರ ಪ್ರೀತ್ಯಾಧರವಾಗಿ ಆಹಾರ ಸಾಮಾಗ್ರಿಗಳನ್ನು ಗೋರಿಗಳಲ್ಲಿ ಇಟ್ಟ ಆಹಾರ ಬೇಯಿಸುವ ಅಲಂಕರಣ ಮಡಿಕೆಗಳು, ಕೆಂಪು ಮತ್ತು ಕಪ್ಪುವರ್ಣದ ಮಡಿಕೆಗಳು, ನೀರಿನ ಬೋಗಣಿಗಳು, ಜಾಡಿಗಳು, ಕಾವಲಿಗಳು ದೊರಕಿವೆ.

ಕರ್ನಾಟಕದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಜಯಪುರ, ಚಿತ್ರದುರ್ಗ ಜಿಲ್ಲೆಯ ' ಚಿಪ್ಪಿನಕೆರೆ ಕೆಂಪು ಮತ್ತು ಕಪ್ಪು ಬಣ್ಣದ ಮಡಿಕೆಗಳು, ದವಸ, ಧಾನ್ಯ ತುಂಬಿಡುವ ಜಾಡಿಯ ಚೂರುಗಳು, ನೀರನ್ನು ಸಂಗ್ರಹಿಸುತ್ತಿದ್ದ ಮಡಿಕೆಗಳು ದೊರಕಿವೆ. ಕರ್ನಲ್‌ಟಾಡ್

ಅವರು ಜಾಲಹಳ್ಳಿಯ ಬಳಿಸೂಕ್ಷ್ಮಶಿಲಾಯುದ ಆಯುಧಗಳನ್ನು ಶೋಧಿಸಿದ್ದಾರೆ. 1945ರಲ್ಲಿ ಸರ್ಜಾಪುರ, 1956–1957ರಲ್ಲಿ ಜಡಿಗೇನಹಳ್ಳಿಯಲ್ಲಿ ಕೆಲವು ವಸ್ತುಗಳು ದೊರಕಿವೆ. ಹುದೂತಿ ಗ್ರಾಮದಲ್ಲಿ ಬೃಹತ್ ಶಿಲಾಗೋರಿಯಲ್ಲಿ ಮಣ್ಣಿನ ಪಾತ್ರೆಗಳು, ಕಬ್ಬಿಣದ ಕಿಟ್ಟ, ಗೊಂಬೆಗಳು, ಕಬ್ಬಿಣದ ವಸ್ತುಗಳು, ವೈವಿಧ್ಯಮಯ ಮಡಿಕೆಗಳು ದೊರಕಿವೆ.

ಗಂಗಾವತಿ ತಾಲೂಕಿನ ಮಲ್ಲಾಪುರ ಗ್ರಾಮದಲ್ಲಿ ಶಿಲಾಯುಗಕ್ಕೆ ಸೇರಿದ ಮಡಕೆಗಳು ದೊರೆತಿವೆ. ಇದೇ ನೆಲೆಯಲ್ಲಿ ಕಪ್ಪು, ಕೆಂಪು ಮಡಿಕೆ ಚೂರುಗಳ ಜೊತೆಗೆ ಅಭ್ರಕಯುಕ್ತ ಪಾತ್ರೆಗಳು ದೊರಕಿವೆ. ಮಾಗಡಿ ತಾಲೂಕಿನ ಅಳಲುಕುಂಟೆ ಸಮೀಪ ಬೃಹತ್‌ಶಿಲಾಯುಗದ ಸಮಾಧಿಗಳ ಶೋಧ ಗಳಿಂದಾಗಿ ಈ ಪ್ರದೇಶಗಳಲ್ಲಿ ಕುಂಬಾರಿಕೆ ವ್ಯಾಪಕವಾಗಿ ಬೆಳವಣಿಗೆಯಾಗಿರುವುದು ತಿಳಿದುಬಂದಿದೆ.

ಹುತ್ತರಿದುರ್ಗ ಪರಿಸರದ ನವಶೋಧಿತ ಬೃಹತ್ ಶಿಲಾಯುಗದ ಸಂಸ್ಕೃತಿಯ ಸಮಾಧಿ ನೆಲೆಗಳು ದೊರೆತಿವೆ. ಆದಿಮಾನವನ ಕಾರ್ಯ ಚಟುವಟಿಕೆಗಳು ಈ ಪ್ರದೇಶಗಳಲ್ಲಿ ಕಂಡುಬಂದಿವೆ. ಇದಕ್ಕೆ ಸಂಬಂಧಿಸಿದ ವಸತಿ ನೆಲೆಗಳು, ಕಬ್ಬಿಣದ ಕಿಟ್ಟ, ಕಪ್ಪು ಮತ್ತು ಕೆಂಪು ವರ್ಣದ ಮಡಿಕೆಗಳು ದೊರಕಿವೆ. ಈ ಪ್ರದೇಶದಲ್ಲಿ ದೊರಕಿರುವ ಪ್ರಾಚ್ಯಾವಶೇಷಗಳು ಅಂದು ಅಸ್ಥಿತ್ವದಲ್ಲಿದ್ದಂತಹ ಶವಸಂಸ್ಕಾರ ಪದ್ದತಿ, ನಂಬಿಕೆ ಮತ್ತು ಪದ್ದತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಚಿತ್ರದುರ್ಗದ ಜಿಲ್ಲೆಯ ಹೊಸದುರ್ಗ ತಾಲೂಕಿನ ಗರಗ ಪರಿಸರದಲ್ಲಿ ಬೃಹತ್ ಶಿಲಾಯಗದ ಸಂಸ್ಕೃತಿಯ ಕಾಲಕ್ಕೆ ಸೇರಿದ ಸಮಾಧಿಗಳು ದೊರಕಿವೆ. ಗುಲ್ಬರ್ಗ ಜಿಲ್ಲೆಯ ಸೇಡಂ ಹತ್ತಿರದ ಕೊಂಕನಹಳ್ಳಿಯಲ್ಲಿ ಗಡಿಗೆ ಮತ್ತು ಮಡಿಕೆ ಚೂರುಗಳು ವ್ಯಾಪಕವಾಗಿ ಲಭ್ಯವಾಗಿವೆ.

**ಆಧುನಿಕ ಕುಂಭ ಕಲೆ:**

ಸಂಪ್ರದಾಯಿಕ ಕುಂಭಕಲೆಗೆ ಕೆಲವು ಲಕ್ಷಣಗಳಿವೆ ಅವುಗಳಲ್ಲಿ ಸುಮಾರು 9000 ವರ್ಷಗಳಷ್ಟು ಇತಿಹಾಸವಿದೆ. ಕುಂಭಕಲೆಯಲ್ಲಿ ಆಧುನಿಕತೆ ಬಹಳ ನಿಧಾನವಾಗಿ ಕಾಲಿಟ್ಟಿದೆ. ಇಂದಿಗೂ ಗ್ರಾಮೀಣ ಪ್ರದೇಶದ ಕುಂಬಾರರು ಭಾರವಾದ ತಿಗುರಿ, ಆವಿಗೆಯನ್ನು ಮಡಕೆ ಮಾಡಲು ಸುಡಲು ಬಳಸುತ್ತಾರೆ. ಆಧುನಿಕ ಕುಂಭಕಲೆಯು ವಿದ್ಯುತ್ತಿನ ಆವಿಷ್ಕಾರದೊಂದಿಗೆ ವಿದ್ಯುತ್‌ಚಕ್ರ ಬಳಕೆ ಮಾಡಿ ಕುಂಭಕಲೆ ಶ್ರಮರಹಿತವು, ಸಮಯ ಉಳಿತಾಯವಾಗಿ ಆಧುನಿಕವಾಗಿ ಬೆಳವಣಿಗೆಯಾಗಲು ಕಾರಣವಾಯಿತು. ಅಲ್ಲದೇ ಸುಧಾರಿತ ಭಟ್ಟಿಗಳು

ಬಳಕೆಗೆ ಬಂದವು. ಮಡಕೆಗಳನ್ನು ಸುಡಲು ತೈಲ, ಅನಿಲ, ವಿದ್ಯುತ್ ಉಪಯೋಗಿಸುವುದು ಆರಂಭವಾಯಿತು. ಇತ್ತಿಚೆಗೆ ಪೈಬರ್ ಕವಚದ ಆವಿಗೆಯನ್ನು ಗಡಿಗೆಗಳನ್ನು ಸುಡಲು ಉಪಯೋಗಿಸಲಾರಂಭಿಸಿದ್ದಾರೆ.

ಭಾರತದಲ್ಲಿ ಪೋರ್ಚುಗೀಸರ ಕಾಲದಲ್ಲಿ ಕರ್ನಾಟಕದಲ್ಲಿ ಮಂಗಳೂರಿನಲ್ಲಿ ಮೊದಲ ಹೆಂಚಿನ ಕೈಗಾರಿಕೆ ಆರಂಭ ಗೊಂಡಿತು. ಕೋಲಾರ ಜಿಲ್ಲೆಯ ಮಾಲೂರು ಸಹಾ ಮಾಳಿಗೆ ಹೆಂಚಿನ ಕಾರ್ಖಾನೆಗಳು ತಲೆಯೆತ್ತಿವೆ. ಮನೆಗಳ ಮೇಲ್ಹಾವಣಿಗೆ ಈ ಹೆಂಚುಗಳನ್ನು ಬಳಸಲಾಗುತ್ತಿದೆ.

ಕೈಗಾರಿಕಾಕ್ರಾಂತಿಯ ನಂತರ ಬದುಕಿನ ಎಲ್ಲ ಕ್ಷೇತ್ರಗಳ ಪಲ್ಲಟಗಳೊಂದಿಗೆ ಗ್ರಾಮೀಣ ಉದ್ದಿಮೆಗಳು ನೆಲಕಚ್ಚಿದವು. ಆ ಸಂದರ್ಭದಲ್ಲಲಿ ಸ್ಟುಡಿಯೋಪಾಟರಿಯ ಕಲಾತಜ್ಞರು ಕಲಾಪ್ರತಿಭೆಗೆ ಆಧ್ಯತೆ ನೀಡಿದರು. ಜೇಡಿಮಣ್ಣು, ಪಿಂಗಾಣಿ, ಟೆರ್ರಾ ಕೋಟಾ ಎಲ್ಲಾ ಪ್ರಕಾರದ ಸೆರಾಮಿಕ್ ವಸ್ತುಗಳು ರೂಪುಗೊಂಡವು. ಸ್ಟುಡಿಯೋ ಪಾಟರಿಗೆ ಅಸ್ಥಿಭಾರ ಹಾಕಿದವರಲ್ಲಿ ಬರ್ನಾಡ್ ಲೀಚ್ ಪ್ರಮುಖರು. ಇವರು ಕುಂಭಕಲೆಯನ್ನು ಪುರುಜ್ಜೀವನಗೊಳಿಸಿದರು. ಸ್ಟುಡಿಯೋ ಪಾಟರಿಯ ಜನಕನೆಂದೆ ಹೆಸರಾದ ಬರ್ನಾಡ್‌ಲೀಚ್ ಹೆಂಡತಿ ಮಕ್ಕಳು ಇಡೀ ಕುಟುಂಬವೇ ಸ್ಟುಡಿಯೋ ಪಾಟರಿಗಾಗಿ ಶ್ರಮಿಸಿದರು.

ಭಾರತದಲ್ಲಿ ಸ್ಟುಡಿಯೋಪಾಟರಿ ಕಲೆಯು ಮುಂಬೈ, ಕಲ್ಕತ್ತಾ, ದೆಹಲಿ, ಮದ್ರಾಸ್ ಬೆಂಗಳೂರು ದೊಡ್ಡ ನಗರಗಳಿಗೆ ಸೀಮಿತವಾಗಿದೆ. ದೆಹಲಿಯ ಬ್ಲೂಪಾಟರಿಯ ದಾದಾಜಿ ಗುರುಚರಣ್‌ಸಿಂಗ್ ಅವರು ಈ ಕಲೆಯನ್ನು ಪ್ರಚಾರಗೊಳಿಸಿದರೆ ಅವರ ಕುಟುಂಬವೇ ಈ ಕಲೆಯ ಉಜ್ವಲತೆಗೆ ಕಾರಣವಾಯಿತು. ಸುಮಾರು 6 ದಶಕಗಳ ಕಾಲ ಈ ಕಲೆಯನ್ನು ಬೆಳಸಿದ್ದ ರಿಂದಾಗಿ ದೊಡ್ಡ ಪರಂಪರೆಯೇ ಬೆಳೆಯಿತು. ಭಾರತದಲ್ಲಿ ಸೆರಾಮಿಕ್ ಕಲೆಯನ್ನು ಇದಾ ಸತೀಶ್, ಗುಜ್ರಾಲ್, ಕ್ರಿಪಾಲ ಸಿಂಗ್, ಶೇಖಾವತ್, ಗೌರಿ ಕೋಸ್ಲಾ, ಮೇರಿಸಿಂಗ್ ಇವರೆಲ್ಲಾ ಗುರುಚರಣ್ ಅವರ ಅಡಿಯಲ್ಲಿ ಪಳಗಿದ ಕಲಾವಿದರು ಸ್ಟುಡಿಯೋ ಪಾಟರಿಯನ್ನು ಬೆಳೆಸಿದರು. ಸಾಂಪ್ರದಾಯಿಕತೆಗಿಂತ ಈ ಕಲೆಯು ಭಿನ್ನವಾಗಿದೆ.

ವಂಶಪಾರಂಪರ್ಯವಾಗಿ ಬೆಳೆದು ಬಂದ ಕುಂಬಾರಿಕೆಗಿಂತ ಸ್ಟುಡಿಯೋ ಪಾಟರಿ ಭಿನ್ನವಾಗಿದೆ. ಕೇವಲ ಹವ್ಯಾಸವಾಗಿ ಕಲಾತ್ಮಕ ಕರಕುಶಲ ಕಲೆಯಾಗಿ ಬದುಕಿನ ಒಂದು ಸವಾಲಾಗಿ ಇದನ್ನು ಸ್ವೀಕರಿಸಿದವರೆ ಹೆಚ್ಚು. ಪದವಿಗಳಿಸಿ ನಿರುದ್ಯೋಗಿಗಳಾದ ಯುವಕರು

ಸ್ಟುಡಿಯೋಪಾಟರಿಯತ್ತ ವಾಲುತ್ತಿರುವುದು ಕಂಡುಬರುತ್ತದೆ. ಕುಂಭಕಲೆಯ ಹೊಸಮುಖವಾದ ಸ್ಟುಡಿಯೋಪಾಟರಿ ದೊಡ್ಡನಗರಗಳಲ್ಲಿ ಕಂಡು ಬರುತ್ತದೆ. ಈ ರೀತಿಯಾಗಿ ಬೆಳವಣಿಗೆಯಾದ ಸಂಪ್ರದಾಯಿಕ ಕುಂಭಕಲೆಯು ಕಣ್ಮರೆಯಾಗುತ್ತಿದ್ದರೂ, ಸಂಪ್ರದಾಯಿಕ ಶೈಲಿಯಲ್ಲಿ ಹೊಸ ರೂಪ ಪಡೆಯುತ್ತಿದೆ. ಪ್ರತಿನಿತ್ಯ ಅನೇಕ ವಸ್ತುಗಳನ್ನು ತಯಾರು ಮಾಡಲಾಗುತ್ತಿದೆ.

ಯುವಜನತೆ ಕುಂಬಾರಿಕೆ ಬಗ್ಗೆ ಒಲವು ಬೆಳಸಿಕೊಂಡರೆ ಈ ಕಲೆಯನ್ನು ಇಂದಿಗೂ ಜೀವಂತವಾಗಿಡಬಹುದು. ಅಲಂಕಾರಿಕತೆಯ ಜೊತೆಗೆ ಗೃಹಬಳಕೆಯ ವಸ್ತುಗಳಾಗಿಯೂ, ಪರಿಸರ ಸ್ನೇಹಿಯಾಗಿಯೂ ಬಳಸಬಹುದು. ಆಧುನಿಕ ಕಾಲಕ್ಕೆ ತಕ್ಕಂತೆ ಅಲಂಕಾರಿಕ ಲವ್ಲಿಪ್ಯಾಡ್, ಮ್ಯಾಜಿಕ್ ದೀಪಗಳು, ತುಳಸಿಕಟ್ಟೆ ಗಳು, ಪೆನ್‌ಸ್ಟಾಂಡ್‌ಗಳು, ಜಾರ್‌ಗಳು, ಆನೆ, ಕುದುರೆ, ಒಂಟೆಗಳನ್ನು ತಯಾರಿಸಬಹುದಾಗಿದೆ. ಭತ್ತ, ರಾಗಿ, ಶೇಖರಿಸಿ ಇಡುತ್ತಿದ್ದ ಗುಡಾಣಗಳು, ದೊಡ್ಡದೊಡ್ಡ ಹೋಟೆಲ್‌ಗಳಲ್ಲಿ ಕೇವಲ ಅಲಂಕಾರಿಕ ವಸ್ತುಗಳಾಗಿವೆ. ಆಧುನೀಕರಣದ, ನಗರೀಕರಣಗಳು, ಜಾಗತೀಕರಣಗಳು ಈ ಕಲೆಗಳನ್ನು ನಶಿಸುತ್ತಿವೆ.

ಕೇವಲ ಅಲಂಕಾರಿಕ ಸಾಮಗ್ರಿಗಳಾಗಿರುವ ಈ ಕುಂಭಕಲೆಯನ್ನ ನಂಬಿ ಅನೇಕರು ಜೀವನ ಮಾಡುವವರಿದ್ದಾರೆ. ಕ್ಷೇತ್ರ ಕಾರ್ಯಮಾಡಿದಂಹ ಸಂದರ್ಭದಲ್ಲಿ ಹಬ್ಬಹರಿದಿನಗಳಲ್ಲಿ, ಬೇಸಿಗೆ ಕಾಲದಲ್ಲಿ, ಧಾರ್ಮಿಕ ಕಾರ್ಯಗಳ ಸಂದರ್ಭಗಳಲ್ಲಿ ಹಾಗೂ ವಿಶೇಷ ಸಂದರ್ಭದಲ್ಲಿ ಮಾತ್ರ ಬಳಸಲಾಗುತ್ತಿದ್ದು ಈ ಕಲೆಯು ಅಸ್ಥಿತ್ವದಲ್ಲಿದ್ದರೂ ಕುಂಭಕಲೆ ವಿನಾಶದಂಚಿನೆಡೆಗೆ ಸಾಗುತ್ತಿದೆ. ಇದರ ಸಂರಕ್ಷಣೆಗೆ ಸರ್ಕಾರ ಗಮನಹರಿಸಬೇಕಿದೆ.

**ಪರಾಮರ್ಶನ ಗ್ರಂಥಗಳು**


- ಅರುಣಿ ಎಸ್.ಕೆ. (2013). *ಬೆಂಗಳೂರು ಪರಿಸರದ ಪ್ರಾಚ್ಯಾವಶೇಷಗಳು.* ಕರ್ನಾಟಕ ಇತಿಹಾಸ ಅಕಾಡೆಮಿ.
- ಕುಂಚೂರು ಬಸವರಾಜ. (2004). *ಕುಂಭಕಲೆ, ಮಣ್ಣಿನಲ್ಲಿ, ಅರಳಿದಕಾವ್ಯ.* ತುಮಕೂರು ಜಿಲ್ಲಾ ಕುಂಬಾರರ ಸಂಘ.
- ಸೂರ್ಯನಾಥ್ ಕಾಮತ್ (2011). *ಧಾರದಾಡ ಜಿಲ್ಲಾ ಗೆಜೆಟಿಯರ್.* ಕರ್ನಾಟಕ ಗೆಜೆಟಿಯರ್ ಇಲಾಖೆ.

- ಶರಣಬಸಪ್ಪ ಕೊಪ್ಪದ್ (2016). *ಗಂಗಾವತಿ ತಾಲ್ಲೂಕಿನ ನವಶೋಧಿತ ಬೃಹತ್ ಶಿಲಾಯುಗದ ನೆಲೆಗಳು ಮತ್ತು ಕಲ್ಲು ಗೊಂಬೆಗಳು.* ಇತಿಹಾಸ ದರ್ಶನ–31 ಕರ್ನಾಟಕ ಇತಿಹಾಸ ಅಕಾಡೆಮಿ.
- ಶಿವತಾರಕ್ ಬಿ (2001). ಕರ್ನಾಟಕದ ಪುರಾತತ್ವ ನೆಲೆಗಳು. *ಇತಿಹಾಸ ದರ್ಪಣ.* ಪುಟ,20